ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ನಾವು ಇದರ ಬಗ್ಗೆ ಹೇಳಬೇಕೆಂದರೆ, ಒಂದು ದುರ್ದೈವದ ಸಂಗತಿ ಏನೆಂದರೆ ಈ ತಕ್ಷಣ ಶೀಪ್ರವಾದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳುವುದಕ್ಕೆ ಬರುವುದಿಲ್ಲ. ಈಗ ಮಳೆ ಬಂದ ತಕ್ಷಣ ಈ ವಾಟರ್ ಟೇಬಲ್ ಸುಧಾರಣೆಯಾಗುತ್ತಿದೆ. ಇದರಲ್ಲಿ ಸಮಸ್ಯೆ ಇಲ್ಲವೆಂದು ನಿಮಗೆ ಅನಿಸಬಹುದು. ಆದರೆ ಲಾಂಗ್ ಟರ್ಮ್ ಸಮಸ್ಯೆ ಅಂತೂ ಇದೆ. ಈ ಲಾಂಗ್ ಟರ್ಮ್ ಸಮಸ್ಯೆ ಎಂದರೆ ಈಗ ನಾವು ಅಂಡರ್ ಗ್ರೌಂಡ್ ವಾಟರ್ ಮಾತ್ರ ಟ್ಯಾಪ್ ಮಾಡುತ್ತಿದ್ದೇವೆ. ನಾವು ಬೋರ್‌ವೆಲ್ ಮುಖಾಂತರ, ಮಿನಿ ವಾಟರ್, ಪೈಪ್ ವಾಟರ್, ಮತ್ತು ಸಾಧ್ಯವಾದರೆ ಹೊಳೆಯಿಂದ, ನದಿಯಿಂದ ನೀರು ತರುವಂಥಾದ್ದಕ್ಕೆ ಇನ್ನೂ ಆ ಸ್ಟೇಜ್‌ಗೆ ನಾವು ಹೋಗಿಲ್ಲ, ಏಕೆಂದರೆ ಈ ಒಂದು ಕಾರ್ಯಕ್ರಮಕ್ಕೆ ಬಹಳಷ್ಟು ದುಡ್ಡು ಖರ್ಚಾಗುತ್ತದೆ, ಮತ್ತೆ ಅಂಡರ್ ಗ್ರೌಂಡ್ ವಾಟರ್ ಸೋರ್ಸಸ್‌ನಿಂದ ಕುಡಿಯುವ ನೀರನ್ನು ಕೊಡುವುದಕ್ಕಾಗುವುದಿಲ್ಲ. ಅಂತಹ ಪ್ರಸಂಗ ಬಂದರೆ ಅದನ್ನು ಕೂಡ ನಾವು ವಿಚಾರ ಮಾಡಬೇಕಾಗುತ್ತದೆ. ಈ ಪರಿಸ್ಥಿತಿ ರಾಜ್ಯದ ಹಲವಾರು ಕಡೆ ಇರುವುದಕ್ಕೆ ಸಾಧ್ಯ ಇದೆ. Time has come to tap flow water. ಇದಕ್ಕೆ ಬಹಳಷ್ಟು ಹಣ ಖರ್ಚಾಗುವುದರಿಂದ ಶೀಪ್ರವಾಗಿ ಎಂದರೆ ಇದೇ ತಿಂಗಳಲ್ಲಿ ಮಾಡುವುದಕ್ಕಾಗುವುದಿಲ್ಲ.

ವಿಶ್ವಬ್ಯಾಂಕ್ ಯೋಜನೆಯಲ್ಲಿ ಹಾಸನ ಜಿಲ್ಲೆಯಲ್ಲಿ ತೆಗೆದುಕೊಂಡಿರುವ ಕುಡಿಯುವ ನೀರಿನ ಯೋಜನೆಯ ಪ್ರಗತಿ.

251 (2350) ಶ್ರೀ ಶಿವರಾಮು ಬಿ. (ಗಂಡಸಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ವಿಶ್ವಬ್ಯಾಂಕ್ ಯೋಜನೆಯಲ್ಲಿ ಹಾಸನ ಜಿಲ್ಲೆಯ ಕುಡಿಯುವ ನೀರಿನ ಯೋಜನೆಗಳನ್ನು ತೆಗೆದುಕೊಂಡಿರುವ ಹಳ್ಳಿಗಳೆಷ್ಟು:

ಆ) ಪ್ರಗತಿ ಯಾವ ಹಂತದಲ್ಲಿದೆ;

ಇ) ಯೋಜನೆ ಪೂರ್ಣಗೊಳ್ಳಲು ಏನಾದರೂ ಕಾಲಮಿತಿ ಇದೆಯೇ? ವಿಳಂಬಕ್ಕೆ ಕಾರಣವೇನು;

ಈ) ಜನತೆಯ ವಂತಿಕೆ ಪೂರ್ಣ ಪ್ರಮಾಣದಲ್ಲಿ ಸಂದಾಯವಾಗಿದೆಯೇ;

ಉ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹಾಸನ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿ 96 ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ.

ಆ) 96 ಗ್ರಾಮಗಳ ಪೈಕಿ

1) 63 ಗ್ರಾಮಗಳಲ್ಲಿ ಯೋಜನೆಗಳು ಮಾರ್ಚ್ ಅಂತ್ಯಕ್ಕೆ ಪೂರ್ಣಗೊಂಡಿವೆ.

2) 33 ಗ್ರಾಮಗಳ ಯೋಜನೆಗಳು ಜೂನ್ ಅಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಇ) ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಲು ವಿಶ್ವಬ್ಯಾಂಕ್‌ನವರ ಸಹಮತಿಯೊಂದಿಗೆ ಕಾಲಮಿತಿಯನ್ನು 30.9.2000 ಕ್ಕೆ ನಿಗದಿ ಮಾಡಿದ್ದು ಸದರಿ ಅವಧಿಯಲ್ಲಿ ಯೋಜನೆಯು ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಈ) ಯೋಜನೆಯ ಮಾರ್ಗಸೂಚಿಗಳಲ್ಲಿ ಪರಿಸರ ನೈರ್ಮಲ್ಯ ಕಾಮಗಾರಿಗಳ ಅಂದಾಜಿನ ಶೇಕಡಾ 30 ರಷ್ಟು ವಂತಿಕೆ ಸ್ವೀಕರಿಸಲು ಅವಕಾಶವಿರುತ್ತದೆ. ಒಟ್ಟು 96 ಗ್ರಾಮಗಳಿಂದ ಒಪ್ಪಿತ ವಂತಿಗೆ ರೂ.80,65,314/- ಪೈಕಿ ರೂ.72,82,226/- ಸಂದಾಯವಾಗಿದೆ.

ಉ) 96 ಗ್ರಾಮಗಳ ಪೈಕಿ 22 ಗ್ರಾಮಗಳ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಸಮಿತಿಗಳ ಶೇಕಡಾ 50 ಕ್ಕಿಂತ ಕಡಿಮೆ ವಂತಿಕೆ ಸಂಗ್ರಹಿಸಿರುತ್ತದೆ.

ಶ್ರೀ ಬಿ.ಶಿವರಾಮ್ : ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ಈ ಯೋಜನೆ ಪ್ರಾರಂಭವಾಗಿದ್ದು ಯಾವಾಗ? ಈ ಯೋಜನೆಗೆ ನಿಗದಿ ಮಾಡಿರುವಂತಹ ಮೊತ್ತ ಎಷ್ಟು? 63 ಗ್ರಾಮಗಳಲ್ಲಿ ಯೋಜನೆಗಳು ಮಾರ್ಚ್ ತಿಂಗಳ ಅಂತ್ಯಕ್ಕೆ ಪೂರ್ಣಗೊಂಡಿದೆ ಎಂದು ಹೇಳಿದ್ದಾರೆ. ಇದು ಪೂರ್ಣವಾಗಿರುವುದರಿಂದ ಸಮರ್ಪಕವಾಗಿ ನೀರಿನ ಬಳಕೆ ಈ ಗ್ರಾಮಗಳಿಗೆ ಆಗುತ್ತಿದೆಯೇ? ಉಳಿದಂತಹ 33 ಗ್ರಾಮಗಳ ಕಾಮಗಾರಿಗಳು ಯಾವ್ಯಾವ ಹಂತದಲ್ಲಿದೆ?

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ನಮ್ಮ ಉತ್ತರ ಸ್ಪಷ್ಟವಾಗಿದೆ ಹಾಗೂ ಸಮರ್ಪಕವಾಗಿ ಇದೆ. ಈ 96 ಗ್ರಾಮಗಳ ಪೈಕಿ 63 ಗ್ರಾಮಗಳ ಕಾಮಗಾರಿ ಪೂರ್ಣವಾಗಿದೆ ಎಂದು ನಮ್ಮ ವರದಿಯ ಪ್ರಕಾರ ಇದೆ. ಇನ್ನು ಈ 33 ಗ್ರಾಮಗಳನ್ನು ಜೂನ್ ತಿಂಗಳಲ್ಲಿ ಪೂರ್ಣಗೊಳಿಸುತ್ತೇವೆ. last date for completion, ಸೆಪ್ಟೆಂಬರ್, 2000ನೇ ಇಸವಿಗೆ ಎಂದು ವರ್ಲ್ಡ್ ಬ್ಯಾಂಕ್‌ನವರು ಈ ಕಾರ್ಯಕ್ರಮವನ್ನು ಪೂರ್ಣಗೊಳಿಸುವ ಸಾಧ್ಯತೆ ಇದೆ. ಇನ್ನು ಪಬ್ಲಿಕ್ ಕಾಂಟ್ರಿಬ್ಯೂಶನ್ ಕೂಡ ತೃಪ್ತಿಕರವಾಗಿ ಇದೆ. ಇದಕ್ಕೆ ಎಂಭತ್ತು ಲಕ್ಷ ರೂಪಾಯಿಗಳ ಎನ್ವಿರಾನ್‌ಮೆಂಟ್ ಸ್ಯಾಂಕ್ಷನ್ ವರ್ಕ್ ಕೊಡಬೇಕೆಂದು ಇತ್ತು. ಅದರಲ್ಲಿ 72 ಲಕ್ಷ ರೂಪಾಯಿಗಳನ್ನು ಜನರಿಂದ ಈಗಾಗಲೇ ಸಂಗ್ರಹ ಮಾಡಿದ್ದಾರೆ, ಅದು ಶೇ.92 ರಷ್ಟು ಆಗುತ್ತದೆ. ಈ 96 ಗ್ರಾಮಗಳ ಪೈಕಿ 26 ಗ್ರಾಮಗಳಲ್ಲಿ ಪಬ್ಲಿಕ್ ಕಾಂಟ್ರಿಬ್ಯೂಷನ್ ಅರ್ಧಕ್ಕಿಂತ ಕಡಿಮೆ ಇದೆ. ಅಲ್ಲಿ ಸ್ವಲ್ಪ ಮೊಟಿವೇಷನ್ ಬೇಕು. ಇದರಲ್ಲೇನೂ ತೊಂದರೆ ಆಗಲಿಕ್ಕಿಲ್ಲ ಎಂದು ನನ್ನ ಭಾವನೆ.

ಶ್ರೀ ಬಿ.ಶಿವರಾಮು : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವಂತಹ ಪ್ರಶ್ನೆಗಳಿಗೆ ಉತ್ತರ ಬರಲಿಲ್ಲ. ಈ ಯೋಜನೆ ಪ್ರಾರಂಭವಾಗಿದ್ದು ಯಾವಾಗ? ಇದಕ್ಕೆ ನಿಗದಿ ಮಾಡಿರುವಂತಹ ಮೊತ್ತ ಎಷ್ಟು?

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಈ ಸ್ಕೀಮ್ ವಿಶ್ವಬ್ಯಾಂಕ್‌ನಡಿಯಲ್ಲಿ ನಡೆಯುತ್ತಿದೆ. Karnataka Integrated Rural Water Supply Scheme, ಏನಿದೆ ಇದು 12 ಜಿಲ್ಲೆಗಳಲ್ಲಿ 1,111 ಗ್ರಾಮಗಳಲ್ಲಿ ವಿಶ್ವಬ್ಯಾಂಕ್ ಸ್ಕೀಮ್‌ನಲ್ಲಿ ತೆಗೆದುಕೊಳ್ಳಲಾಗಿದೆ. ಅದಕ್ಕೆ 447 ಕೋಟಿ ರೂಪಾಯಿಗಳ ಅಂದಾಜು ಮಾಡಿದ್ದಾರೆ. ಇದರಲ್ಲಿ 587 ಗ್ರಾಮಗಳಲ್ಲಿ ಈಗಾಗಲೇ ಯೋಜನೆಯನ್ನು ಪೂರೈಸಿದ್ದಾರೆ ಎನ್ನುವ ವರದಿ ಇದೆ. ಹಾಸನ ಜಿಲ್ಲೆಯಲ್ಲಿ ಈ ಪ್ರೋಗ್ರಾಂ 96 ಹಳ್ಳಿಗಳಲ್ಲಿ ಅಂದರೆ 8 ತಾಲ್ಲೂಕುಗಳಲ್ಲಿ ನಡೆಯುತ್ತಿದೆ. ಈ 96 ಹಳ್ಳಿಗಳ ಪೈಕಿ

63 ಹಳ್ಳಿಗಳಲ್ಲಿ ಈಗಾಗಲೇ ಯೋಜನೆ ಪೂರ್ತಿಯಾಗಿದೆ, ಬಾಕಿ 33 ಹಳ್ಳಿಗಳಲ್ಲಿ ಜೂನ್ 2000ದ ಹೊತ್ತಿಗೆ ಪೂರೈಸುತ್ತೇವೆ. ಇದು ನನ್ನ ಮುಂದೆ ಇರತಕ್ಕಂಥ ಮಾಹಿತಿ.

ಶ್ರೀ ಬಿ.ಶಿವರಾಮು : ' ವರದಿಯ ಆಧಾರದ ಮೇಲೆ ' ಎಂದು ಅವರು ಇಲ್ಲಿಯವರೆಗೂ ನಮಗೆ ಉತ್ತರ ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳು ಹಾಸನ ಜಿಲ್ಲೆಗೆ ಭೇಟಿ ಕೊಟ್ಟಿದ್ದರು. ಅಧಿಕಾರಿಗಳ ಸಮ್ಮುಖದಲ್ಲಿ ನಮ್ಮ ಜೊತೆಯಲ್ಲಿ ಚರ್ಚೆ ಮಾಡಿದ್ದರು. ಆ ಸಂದರ್ಭದಲ್ಲಿ ಇದರಲ್ಲಿತಕ್ಕಂಥ ಲೋಪದೋಷ ಏನು ಎನ್ನುವುದನ್ನು ನಾವು ಸಚಿವರ ಗಮನಕ್ಕೆ ತಂದಿದ್ದೇವೆ. ನಾನು ಪ್ರಾಮುಖ್ಯವಾದ ಒಂದು ಪ್ರಶ್ನೆಯನ್ನು ಕೇಳಿದೆ. ಮಾರ್ಚ್ ಅಂತ್ಯಕ್ಕೆ 63 ಗ್ರಾಮಗಳಲ್ಲಿ ಯೋಜನೆ ಪೂರ್ಣಗೊಂಡಿದೆ ಎನ್ನುವ ಮಾತನ್ನು ವರದಿ ಆಧರಿಸಿ ಏನು ಹೇಳಿದರು, ಅದಕ್ಕೆ ಪೂರಕವಾದಂಥ ಪ್ರಶ್ನೆಯೆಂದರೆ, ಆ 63 ಗ್ರಾಮಗಳಲ್ಲಿ ಸಮರ್ಪಕವಾದಂಥ ನೀರಿನ ಬಳಕೆ ಆಗುತ್ತಿದೆಯೇ? ಈ ಮೂಲಭೂತವಾದಂಥ ಪ್ರಶ್ನೆಗೆ ನನಗೆ ಉತ್ತರ ಸಿಕ್ಕಲಿಲ್ಲ. ಅದಕ್ಕೆ ಕೆಲವು ನಿಬಂಧನೆಗಳಿವೆ. ವರ್ಲ್ಡ್ ಬ್ಯಾಂಕ್ ವಾಟರ್ ಸಪ್ಲೈನವರು ಇಷ್ಟು ಪ್ರಮಾಣದ ಹಣವನ್ನು ಕೊಟ್ಟು ಕೆಲಸ ಮಾಡಿ ಎಂದು ಹೇಳಿದ್ದು, ಈ ಕೆಲಸ ಪ್ರಾರಂಭವಾಗಿ ನಾಲ್ಕೂವರೆ ವರ್ಷವಾಯಿತು. ಈ ಯೋಜನೆಯ ಪೂರ್ಣ ವಿವರ ನನ್ನ ಹತ್ತಿರ ಇದೆ. ಆದರೆ ನಾನು ಏಕೆ ಕೇಳುತ್ತಿದ್ದೇನೆ ಎಂದರೆ, ಸಮರ್ಪಕವಾದಂಥ ನೀರಿನ ಬಳಕೆಯ ವ್ಯವಸ್ಥೆ ಈ ಗ್ರಾಮಗಳಲ್ಲಿ ನಿರ್ಮಾಣವಾಗಿಲ್ಲ. It was brought to the knowledge of the hon.Minister when he visited hassan. ಹೈಡ್ರಾಲಿಕ್ ಟೆಸ್ಟನ್ನು, ನೀರು ಯಾವ ರೀತಿ ಹೋಗುತ್ತಿದೆ ಎನ್ನುವ ಟೆಸ್ಟನ್ನು ಕೂಡ ಇನ್ನೂ ಮಾಡಿಲ್ಲ. ಸುಮ್ಮನೆ ಇವರು ಹೋಗಿ ಕೆಲಸ ಕಂಪ್ಲೀಟ್ ಆಗಿದೆ ಎಂದು ಬಂದು ಬಿಟ್ಟರೆ ಅದು ಮುಗಿದು ಹೋಗಿದೆ ಎಂದು ಅರ್ಥವೇ? ಅದು ಅಷ್ಟೇ ಆದರೆ ನಾನು ಏನೂ ಪ್ರಶ್ನೆಗಳನ್ನು ಕೇಳುವುದಿಲ್ಲ. ಒಬ್ಬರು ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಲಿ, ವರದಿ ಆಧಾರದ ಮೇಲೆ ಆ 63 ಗ್ರಾಮಗಳಲ್ಲಿ ನೀರಿನ ಬಳಕೆ ಆಗುತ್ತಿದೆ ಎಂದು ಏನು ಹೇಳಿದ್ದಾರೆ, ಅದು ಸಮರ್ಪಕವಾಗಿ ಆಗುತ್ತಿದೆಯೇ, ಇಲ್ಲವೇ ಎನ್ನುವ ಬಗ್ಗೆ 10 ದಿವಸಗಳಲ್ಲಿ ವರದಿ ತರಿಸಿ ಕೊಡಲಿ ಸಾಕು. ನಾನು ಬೇರೆ ಯಾವ ಪ್ರಶ್ನೆಯನ್ನೂ ಕೇಳುವುದಿಲ್ಲ. ಏಕೆಂದರೆ, ಎಷ್ಟೊಂದು ಹಣ ಇದಕ್ಕೆ ಉಪಯೋಗವಾಗುತ್ತಿದೆ, ಆ ಹಣದ ಬಳಕೆ ಸಮರ್ಪಕವಾಗಿ ಆಗಲಿಲ್ಲ, ಅದರ ಉಪಯೋಗ ರೈತರಿಗೆ ದೊರಕಲಿಲ್ಲ ಎಂದರೆ, What is our committment to the Rural people?

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ನಾನು ಹಾಸನಕ್ಕೆ ಹೋಗಿದ್ದಾಗ ಈ ಪ್ರಶ್ನೆಯ ಬಗ್ಗೆ ಸುದೀರ್ಘವಾದ ಚರ್ಚೆಯಾಯಿತು. ಆ ಸಂದರ್ಭದಲ್ಲಿ ಎಲ್ಲರೂ ಇದ್ದರು. ಕೆಲವು ಕಡೆ ಎಲೆಕ್ಟ್ರಿಸಿಟಿ ಬಂದಿಲ್ಲ, ಅದಕ್ಕಾಗಿ ಶುರುವಾಗಿಲ್ಲ ಎನ್ನುವ ದೂರು ಇದೆ. ಹಾಸನ ಜಿಲ್ಲೆಯಲ್ಲಿ ಮುಕ್ತಾಯವಾಗಿರುವ ನೀರಾವರಿ ಕಾಮಗಾರಿಗಳಿಗೆ ಎನರ್ಜೈಸ್ ಮಾಡುವ ಬಗ್ಗೆ ನಾನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅದರಲ್ಲಿ ತೃಪ್ತಿಕರವಾದಂಥ ಕೆಲಸವಾಗಿಲ್ಲ, ಈಗಲಾದರೂ ಅದನ್ನು ಮಾಡಬೇಕು ಎಂದು ಅವರು ಹೇಳಿದ್ದಾರೆ, ನಾನೂ ಹೇಳಿದ್ದೇನೆ. ವರ್ಲ್ಡ್ ಬ್ಯಾಂಕ್ ಯೋಜನೆಯಲ್ಲಿ ತೆಗೆದುಕೊಂಡಿರುವ ಗ್ರಾಮಗಳಲ್ಲಿ ನೀರು ಬರುತ್ತಿಲ್ಲ, ಸರಿಯಾಗಿ ಕೆಲಸ ಆಗುತ್ತಿಲ್ಲ ಎಂದರೆ ಅದನ್ನು ಇನ್ಸ್‌ಪೆಕ್ಟ್ ಮಾಡಿ ಎಂದು ನಾನು ಅದೇ ಸಭೆಯಲ್ಲಿ ಹೇಳಿದ್ದೇನೆ. ಇನ್ಸ್‌ಪೆಕ್ಷನ್‌ನಿಂದ

ಏನು ಗೊತ್ತಾಯಿತು, ಇವತ್ತು ಏನು ಪರಿಸ್ಥಿತಿ ಇದೆ ಎನ್ನುವುದನ್ನು ತಾವು ಹೇಳಬೇಕು. ಆಡಳಿತಾತ್ಮಕವಾಗಿ ನಾವು ಏನು ಮಾಡಲು ಸಾಧ್ಯವಿದೆಯೋ ಆ ಎಲ್ಲ ಆದೇಶಗಳನ್ನು ತಮ್ಮ ಸಮಕ್ಷಮದಲ್ಲೇ ಕೊಟ್ಟಿದ್ದೇವೆ. ಆದಕಾರಣ ಕೆಲವು ಕಡೆ ದೋಷವಿದ್ದರೆ ಅದನ್ನು ಸರಿಪಡಿಸುತ್ತೇನೆ.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೆ, ಅಂತಿಮವಾಗಿ ಇಷ್ಟು ಆಗಬೇಕು. ಈಗಾಗಲೇ ಹೇಳಿದ 63 ಹಳ್ಳಿಗಳ ಹೆಸರು ಮತ್ತು ಅಲ್ಲಿ ಸಮರ್ಪಕವಾಗಿ ನೀರು ಬಳಕೆಯಾಗುತ್ತಿದೆಯೇ ಎನ್ನುವ ಮಾಹಿತಿಯನ್ನು ಕೊಡಬೇಕು. ಅಲ್ಲಿಗೆ ಕೂಡಲೇ ಒಬ್ಬರು ಹಿರಿಯ ಅಧಿಕಾರಿಗಳನ್ನು ಕಳುಹಿಸಿ, ಈ 63 ಹಳ್ಳಿಗಳ ಹೆಸರಿನಲ್ಲಿ ನೀರು ಬಳಕೆಯಾಗುತ್ತಿದೆಯೇ ಎನ್ನುವ ವರದಿಯನ್ನು ಸಚಿವರು 10 ದಿವಸಗಳಲ್ಲಿ ಒದಗಿಸುತ್ತಾರೆ ಎನ್ನುವ ಬಗ್ಗೆ ಒಂದು ಆಶ್ವಾಸನೆ ಮತ್ತು ತಪ್ಪಾಗಿದ್ದರೆ, ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮತ್ತೊಂದು ಆಶ್ವಾಸನೆಗಳನ್ನು ಕೊಡಬೇಕು. ಇವೆರಡು ಆಶ್ವಾಸನೆಗಳನ್ನು ಕೊಟ್ಟರೆ ಸಾಕು, ಬಾಕಿ ಏನೂ ನನಗೆ ಬೇಡ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಇಂಜಿನಿಯರ್-ಇನ್-ಚೀಫ್ ಅವರನ್ನು ತಕ್ಷಣ ಕಳುಹಿಸುತ್ತೇನೆ. ಅವರು ಈಗಾಗಲೇ ಇನ್ಸ್‌ಪೆಕ್ಷನ್ ಮಾಡಿರಬೇಕು. ಅದರ ಬಗ್ಗೆ ಒಂದು ವರದಿ ಕೊಡಲು ಹೇಳುತ್ತೇನೆ. ಆ ವರದಿ ಬಂದ ನಂತರ ತಮಗೆ ತಿಳಿಸುತ್ತೇನೆ. ಅವರು ಸ್ವಂತಃ ಇವುಗಳನ್ನೆಲ್ಲಾ ವಿಸಿಟ್ ಮಾಡಿ ಒಂದು ವರದಿ ಕೊಡಲಿ?

ಶ್ರೀ ಬಿ.ಶಿವರಾಮು : ಎಲ್ಲಾ ಕೊಳವೆ ಬಾವಿಗಳ ನೀರಿನ ಪ್ರಮಾಣವನ್ನು ಒಂದು ತಿಂಗಳೊಳಗೆ ಟೆಸ್ಟ್ ಮಾಡಿಸಬೇಕು ಎಂದು ತಾವು ಇಂಜಿನಿಯರ್-ಇನ್-ಚೀಫ್‌ಗೆ ಜವಾಬ್ದಾರಿ ವಹಿಸಿದ್ದಿರಿ. ಇಲ್ಲಿಯವರೆಗೆ ಅವರು ಹಾಸನದಲ್ಲಿ 50 ಹಳ್ಳಿಗಳನ್ನೂ ಮಾಡಿಲ್ಲ. ಇದು ತಮ್ಮ ಸಮ್ಮುಖದಲ್ಲೇ ನಡೆದಂಥ ವಿಚಾರ; ತಮಗೆ ಅರಿವಾಗಿದೆ. ಒಂದು ಬಾವಿಯಲ್ಲೂ ಸಹ ನೀರಿನ ಪ್ರಮಾಣವನ್ನು ಟೆಸ್ಟ್ ಮಾಡತಕ್ಕಂಥ ಕೆಲಸವನ್ನು ನಿಮ್ಮ ಇಂಜಿನಿಯರ್-ಇನ್-ಚೀಫ್ ಇದುವರೆಗೂ ಮಾಡಿಲ್ಲ. ಆವತ್ತು ನಾನು ಹೇಳಿದೆ, ಒಂದು ತಿಂಗಳು ಬೇಡ, 2 ತಿಂಗಳು ತೆಗೆದುಕೊಳ್ಳಿ, ಆದರೆ ಅಷ್ಟರಲ್ಲಿ ಮುಗಿಸುತ್ತೇವೆ ಎನ್ನುವ ಆಶ್ವಾಸನೆಯನ್ನು ಸಚಿವರ ಎದುರಿಗೆ ಕೊಡಬೇಕು ಮತ್ತೆ ಮೂರು ತಿಂಗಳ ನಂತರ ಸಚಿವರು ಮತ್ತೆ ಜಿಲ್ಲೆಗೆ ಬಂದು ಪರಿಶೀಲನೆ ಮಾಡಬೇಕು ಎಂದು ತಮ್ಮ ಎದುರಿಗೇ ಒತ್ತಾಯ ಮಾಡಿದೆ. ಆಗ ತಾವು ವಿದ್ಯುದ್ದೀಕರಣದ ವ್ಯವಸ್ಥೆ ಮತ್ತು ಯೀಲ್ಡ್ ಟೆಸ್ಟ್ ಮಾಡುವ ಎರಡು ಕೆಲಸಗಳನ್ನು ಹೇಳಿದಿರಿ. ಆ ಎರಡು ಕೆಲಸಗಳೂ ಜಾರಿಯಾಗತಕ್ಕಂಥಾದ್ದು ಆಗುತ್ತಿಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗಲಾದರೂ ಮಾಡಿಸಿ ಎಂದು ತಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇನ್ನು ಒಂದು ತಿಂಗಳಲ್ಲಾದರೂ ಮತ್ತೆ ಬಂದು, ಹಿಂದೆ ತಾವು ಏನು ಹೇಳಿದಿರಿ ರಿವ್ಯೂ ಮಾಡಬೇಕು ಎಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ : ಪ್ರತಿಯೊಂದು ವಾಟರ್ ಸೋರ್ಸ್‌ನಲ್ಲಿ ಎಷ್ಟು ನೀರು ಬರುತ್ತದೆ ಎನ್ನುವುದನ್ನು ಅಳತೆ ಮಾಡುವುದು ಅಷ್ಟು ಸುಲಭವಾದಂಥ ಕೆಲಸವಲ್ಲ. ಅದನ್ನು ತಕ್ಷಣ ಮಾಡಲು ಆಗುವುದಿಲ್ಲ. ನಾವು ಸದ್ಯಕ್ಕೆ ಏನು ಹೇಳಿದ್ದೇವೆ ಎಂದರೆ, ಅಲ್ಲಿಗೆ ವಿಸಿಟ್ ಕೊಟ್ಟು ಅಲ್ಲಿ ನೀರು ಬರುತ್ತಿದೆಯೇ ಅಥವಾ ಇಲ್ಲವೇ ಎನ್ನುವಷ್ಟನ್ನಾದರೂ ನೋಡಬೇಕು

ಎಂದು ಹೇಳಿದ್ದೇವೆ. ಆ ಕೆಲಸಗಳನ್ನು ಅವರು ಖಂಡಿತವಾಗಿಯೂ ಮಾಡುತ್ತಾರೆ. ಅದರಲ್ಲಿ ಏನಾದರೂ ದೋಷ ಕಂಡುಬಂದರೆ ಅದನ್ನು ಸರಿಪಡಿಸುತ್ತೇವೆ. ಕೆಲವು ಸ್ಕೀಂಗಳು ಸರಿಯಾಗಿ ನಡೆದಿಲ್ಲ ಎಂದು ಮಾನ್ಯ ಸದಸ್ಯರು ಹೇಳುವುದಾದರೆ ಅದನ್ನು ಪ್ರತ್ಯೇಕವಾಗಿ ನೋಡಿಸೋಣ. ಜನರಲ್ ಸ್ಟೇಟ್‌ಮೆಂಟ್ ಬೇಡ.

ಶ್ರೀ ಕೆ.ಹೆಚ್.ಹನುಮೇಗೌಡ : ಮಾನ್ಯ ಅಧ್ಯಕ್ಷರೇ, ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್‌ನಿಂದ ನಡೆಯುತ್ತಿರತಕ್ಕಂಥ ಕುಡಿಯುವ ನೀರಿನ ಯೋಜನೆಗಳಲ್ಲಿ ಕೆಲವು ಲೋಪದೋಷಗಳಿವೆ. ನನಗೆ ಕೆಲವು ಹಳ್ಳಿಯವರು ಬಂದು ಹೇಳಿದರು. ಮೂರು ಅಡಿ ಆಳದಲ್ಲಿ ಪೈಪನ್ನು ಹೂಣಬೇಕು, ಆದರೆ ಅಷ್ಟು ಆಳದಲ್ಲಿ ಹೂಣಿಲ್ಲ, ಮೇಲುಗಡೆ ಒಂದು, ಒಂದೂವರೆ ಅಥವಾ ಎರಡು ಅಡಿಯಲ್ಲಿ ಹೂಣಿದ್ದಾರೆ. ಅದರಿಂದಾಗಿ ಲಾರಿ ಅಥವಾ ಟ್ರಾ ಕ್ಟರ್ ಅದರ ಮೇಲೆ ಹೋದರೆ ಅವು ಒಡೆದು ಹೋಗುತ್ತವೆ ಎಂದು ದೂರು ಹೇಳಿದರು. ಎರಡನೇ ದೂರು ಎಂದರೆ, ಓವರ್‌ಹೆಡ್ ಟ್ಯಾಂಕ್ ಕಟ್ಟಿದ್ದಾರೆ. ಬೋರ್‌ವೆಲ್‌ನಿಂದ ಟ್ಯಾಂಕಿಗೆ ನೀರನ್ನು ಸಪ್ಲೈ ಮಾಡಿ ಅಲ್ಲಿಂದ ಮನೆಗಳಿಗೆ ಕೊಡಬೇಕು. ಹೀಗೆನಾದರೂ ಮೋಟರ್ ಸ್ಟಾರ್ಟ್ ಮಾಡಿ ಓವರ್‌ಹೆಡ್ ಟ್ಯಾಂಕಿಗೆ ನೀರನ್ನು ಸಪ್ಲೈ ಮಾಡಿಕೊಂಡು ನಲ್ಲಿಗಳಿಗೆ ಬಿಟ್ಟರೆ ಪೈಪುಗಳೆಲ್ಲಾ ಕಿತ್ತು ಹೋಗುತ್ತವೆಯಂತೆ. ಇದಕ್ಕೆ ಕಾರಣವೆಂದರೆ, ಲೋ ಗೇಜ್ ಪೈಪನ್ನು ಅಳವಡಿಸಿಬಿಟ್ಟಿದ್ದಾರೆ. ಹಾಗಾಗಿ ಈ ಯೋಜನೆಯಿಂದ ಕೆಲವು ಹಳ್ಳಿಗಳಿಗೆ ಪ್ರಯೋಜನವಾಗುತ್ತಿಲ್ಲ. ಲೋ ಗೇಜ್ ಪೈಪ್ ಹಾಕಿರುವುದರಿಂದ ಪೈಪು ಕಿತ್ತು ಹೋಗುತ್ತದೆ ಎಂದು ಬೆಳಿಗ್ಗೆ ಎದ್ದು ಡೈರೆಕ್ಟಾಗಿ ನೀರನ್ನು ಪಂಪ್ ಮಾಡುತ್ತಾರೆ. ಅದರಿಂದ ಏನಾಗುತ್ತದೆಂದರೆ ಕೆಲವು ಕಡೆಗೆ ನೀರು ಹೋಗುತ್ತದೆ, ಕೆಲವು ಕಡೆಗೆ ಹೋಗುವುದಿಲ್ಲ. ಓವರ್‌ಹೆಡ್ ಟ್ಯಾಂಕಿನಲ್ಲಿ ನೀರನ್ನು ಸ್ಟಾಕ್ ಮಾಡಿಕೊಂಡು ಬೆಳಗಿನ ಜಾವ ಬಿಟ್ಟರೆ ಎಲ್ಲ ಕಡೆಗೂ ಕುಡಿಯುವ ನೀರು ಹೋಗುತ್ತದೆ. ಪೈಪು ಕಿತ್ತು ಹೋಗುತ್ತದೆಂದು ಇವರು ಬೆಳಿಗ್ಗೆ ಡೈರೆಕ್ಟಾಗಿ ಸ್ಟಾರ್ಟ್ ಮಾಡುತ್ತಾರೆ. ಓವರ್‌ಹೆಡ್ ಟ್ಯಾಂಕಿಗೆ ನೀರು ಬಿಡುವುದೇ ಇಲ್ಲ. ಡೈರೆಕ್ಟಾಗಿ ಪಂಪ್ ಆನ್ ಮಾಡಿ ಗ್ರಾಮಾಂತರ ಪ್ರದೇಶಕ್ಕೆ ನೀರು ಕೊಡುತ್ತಿದ್ದಾರೆ. ಈ ರೀತಿಯ ದೂರು ಎರಡು ಮೂರು ಕಡೆಗಳಿಂದ ಬಂದಿದೆ. ನಾನು ನಿರ್ದಿಷ್ಟವಾಗಿ ಎರಡು ಊರಿನ ಹೆಸರನ್ನು ಹೇಳುತ್ತೇನೆ. ದಾಸರಕೊಪ್ಪಲು ಮತ್ತು ಹರಳಳ್ಳಿ; ಈ ಎರಡು ಗ್ರಾಮಗಳಲ್ಲಿ ಈ ಬಗ್ಗೆ ದೂರು ಬಂದಿದೆ. ಬೇರೆ ಕಡೆಯಿಂದಲೂ ಬಂದಿದೆ. ಮಾನ್ಯ ಸದಸ್ಯರಾದ ಶಿವರಾಮುರವರು ಹೇಳಿದ ಹಾಗೆ ಬೇರೆ ಕಡೆ ವೆರಿಫೈ ಮಾಡಿದರೆ ಕ್ರಮ ತೆಗೆದುಕೊಳ್ಳುತ್ತಾರೆ. ಆದರೆ ಇಲ್ಲಿ ಮೂರು ಅಡಿ ಆಳದಲ್ಲಿ ಪೈಪು ಆಳವಡಿಸದೇ ಇರುವುದು, ಕೇವಲ ಒಂದೂವರೆ, ಎರಡು ಅಡಿ ಆಳದಲ್ಲಿ ಹಾಕಿದ್ದಾರೆ. ಲಾರಿ, ಟ್ರಾ ಕ್ಟರ್ ಹೋದರೆ ಅವು ಒಡೆದು ಹೋಗುತ್ತವೆ. ಎರಡನೆಯದು, ಲೋ ಗೇಜ್ ಪೈಪ್ ಹಾಕಿರುವ ಕಾರಣ ನೀರನ್ನು ಓವರ್‌ಹೆಡ್ ಟ್ಯಾಂಕಿಗ್ ಪಂಪ್ ಮಾಡುತ್ತಿಲ್ಲ. ದಯವಿಟ್ಟು ಇದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಂಡು ಅವರಿಗೆ ನೀರು ಸಿಗುವ ಹಾಗೆ ವ್ಯವಸ್ಥೆ ಮಾಡಿಕೊಡಬೇಕು.

ಶ್ರೀ ಬಿ.ಶಿವರಾಮು : ಹೈಡ್ರಾಲಿಕ್ ಟೆಸ್ಟ್ ಮಾಡಬೇಕು ಎಂದು ವರ್ಲ್ಡ್ ಬ್ಯಾಂಕ್ ನಿಬಂಧನೆ ಇದೆ. ಅದನ್ನು ಮಾಡುತ್ತಿಲ್ಲ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಈ ಎಲ್ಲ ವಿಷಯಗಳನ್ನು ನಾವೆಲ್ಲರೂ 2-3 ಗಂಟೆ ಕುಳಿತು ಕೂಲಂಕುಷವಾಗಿ ಚರ್ಚೆ ಮಾಡಿದ್ದೇವೆ. ಮಾನ್ಯ ಹನುಮೇಗೌಡರೆ, ತಾವೂ ಕೂಡ ಇದ್ದಿರಿ. ಅದನ್ನೇ ಪುನಃ ನಾವು ಇಲ್ಲಿ ಚರ್ಚೆ ಮಾಡುವ ಅಗತ್ಯವಿಲ್ಲ ಎಂದು ನನಗನ್ನಿಸುತ್ತದೆ. ಹಾಸನ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯಿತಿಯನ್ನು ದಕ್ಷತೆಯಿಂದ ನಡೆಸಬೇಕು, ಜಿಲ್ಲಾ ಪಂಚಾಯಿತಿ ಮುಖಾಂತರವೇ ಈ ಕೆಲಸಗಳನ್ನು ದಕ್ಷತೆಯಿಂದ ಮಾಡಿಸಬೇಕು. ನನಗನ್ನಿಸುತ್ತದೆ, ಹಾಸನ ಜಿಲ್ಲೆಯಲ್ಲಿ ಸ್ವಲ್ಪ ರಾಜಕೀಯ ಜಾಸ್ತಿ ಇದೆ ಎಂದು.

ಶ್ರೀ ಬಿ.ಶಿವರಾಮು : ಮಾನ್ಯ ಅಧ್ಯಕ್ಷರೇ, ಇದು ಜಿಲ್ಲಾ ಪಂಚಾಯಿತಿಗೆ ಬರುವುದಿಲ್ಲ. ಇದಕ್ಕೆಂದೇ ಒಂದು ಪ್ರತ್ಯೇಕ ವಿಭಾಗವಿದೆ. ಇದು ಜಿಲ್ಲಾ ಪಂಚಾಯಿತಿಯ ಕೆಲಸ ಅಲ್ಲ.

ಶ್ರೀ ಹಂಪನಗೌಡ ಬಾದರ್ಲಿ : ಈ ಯೋಜನೆಗೂ ಜಿಲ್ಲಾ ಪಂಚಾಯಿತಿಗೂ ಸಂಬಂಧವೇ ಇಲ್ಲ. ವರ್ಲ್ಡ್ ಬ್ಯಾಂಕ್ ಸ್ಕೀಮೇ ಬೇರೆ, ಅದಕ್ಕೆಂದೇ ಒಬ್ಬರು ಡೈರೆಕ್ಟರ್, ಆಫೀಸರ್ಸ್ ಪ್ರತ್ಯೇಕವಾಗಿ ಇದ್ದಾರೆ.

ಶ್ರೀ ಬಿ.ಶಿವರಾಮು : ಇದರ ವಿಭಾಗವೇ ಬೇರೆ ಇದೆ. ಇದು ಜಿಲ್ಲಾ ಪಂಚಾಯಿತಿಯ ಕಂಟ್ರೋಲ್‌ನಲ್ಲಿ ಇಲ್ಲ. ಅದು ಸಮಿತಿಗೆ ಹೋಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಅಧ್ಯಕ್ಷರೇ, ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಸ್ಕೀಂಗಳು ಕಳೆದ 7-8 ವರ್ಷಗಳಿಂದ ರಾಜ್ಯದಲ್ಲಿ ಬೇಸಿಕಲ್ ಆಗಿ ನಡೆಯುತ್ತಿರತಕ್ಕಂಥ ಕಾರ್ಯಕ್ರಮಗಳು. ಕ್ರಿಟಿಕಲ್ ಪ್ರಾಬ್ಲಂ ಇರುವಂಥ ಹಳ್ಳಿಗಳಲ್ಲಿ, ಎಕ್ಸಸ್ ನೀರು ಎಲ್ಲಿ ಬೇಕು ಅಂಥ ಕಡೆಗಳಲ್ಲಿ, ಪಾಪುಲೇಷನ್ ಜಾಸ್ತಿ ಇರುವಂಥ ಕಡೆಗಳಲ್ಲಿ ತೆಗೆದುಕೊಂಡಿರತಕ್ಕಂಥ ಕೆಲಸಗಳಿವು. ಇದನ್ನು ಎಕ್ಸಿಕ್ಯೂಟ್ ಮಾಡಲಿಕ್ಕೆ ವಿಶೇಷವಾಗಿ ಒಬ್ಬ ಚೀಫ್ ಇಂಜಿನಿಯರ್, ಒಬ್ಬರು ಸೂಪರಿಂಟೆಂಡೆಂಟ್ ಇಂಜಿನಿಯರ್ ಮತ್ತು 2-3 ಜಿಲ್ಲೆಗೆ ಸೇರಿದಂತೆ ಒಬ್ಬರು ಎಕ್ಸಿಕ್ಯೂಟಿವ್ ಇಂಜಿನಿಯರ್ ಇದ್ದಾರೆ. ಅವರ ಮೇಲ್ವಿಚಾರಣೆ ಮಾಡುವುದಕ್ಕೆ ಜಿಲ್ಲಾ ಪರಿಷತ್ತಿನ ಸಿ.ಇ.ಒ.ರವರಿಗಾಗಲಿ ಅಥವಾ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗಾಗಲಿ ಬರುವುದಿಲ್ಲ. ಆದ್ದರಿಂದ ಇದನ್ನು ನೇರವಾಗಿ ಸರ್ಕಾರದ ಆರ್.ಡಿ.ಪಿ.ಆರ್. ಇಲಾಖೆಯವರೇ ಮಾಡುತ್ತಿದ್ದಾರೆ. ದುರ್ದೈವವಶಾತ್ ಆಂಧ್ರಪ್ರದೇಶದಿಂದ ಬಂದಿರತಕ್ಕಂಥ ಕೆಲವು ಕಂಟ್ರಾಕ್ಟರುಗಳು ಕಂಟ್ರಾಕ್ಟ್ ತೆಗೆದುಕೊಂಡು ಒಂದೊಂದು ಕೆಲಸವನ್ನು 4 ವರ್ಷ, 5 ವರ್ಷ, 8 ವರ್ಷ, 10 ವರ್ಷ ಹೀಗೆ ಬಹಳ ಮಂದಗತಿಯಲ್ಲಿ ಮಾಡಿಸುತ್ತಿದ್ದಾರೆ. ಆದ್ದರಿಂದ ಈ ಕೆಲಸಗಳನ್ನು ಬೇಗ ಮುಗಿಸಲಿಕ್ಕೆ ಕಾಲದ ಮಿತಿಯನ್ನು ಹಾಕಿ ಮಾಡುವುದಕ್ಕೆ ಸಾಧ್ಯವೇ?

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕ್ ನೆರವಿನ ಯೋಜನೆಯ ಕೆಲಸಗಳಿಗೆ ಕಾಲಮಿತಿಯನ್ನು ಹಾಕುವುದಕ್ಕೆ ಸಾಧ್ಯ ಇದೆ. ಮೊದಲು ಟೈಮ್ ಫಿಕ್ಸ್ ಮಾಡಿರುವುದನ್ನು ಸ್ವಲ್ಪ ಮುಂದಕ್ಕೆ ಹಾಕಿ ಸೆಪ್ಟೆಂಬರ್‌ನಲ್ಲಿ ಇಂಥ ಕೆಲಸಗಳನ್ನು ಪೂರೈಸಬೇಕೆಂದು ಕಾಲಮಿತಿಯನ್ನು ಹಾಕಿದ್ದೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನಾನು ಹೇಳಿದ್ದನ್ನು ಮಾನ್ಯ ಮಂತ್ರಿಗಳು ಗಮನಿಸಿಲ್ಲವೆಂದು ತೋರುತ್ತದೆ. ನಾನು ಮತ್ತು ನಮ್ಮ ಮಾನ್ಯ ಸದಸ್ಯರುಗಳು ಏನು ಹೇಳಿದ್ದೇವೆಂದರೆ ವಿಶ್ವ ಬ್ಯಾಂಕಿನ ನೆರವಿನ ಮೂಲಕ ಕುಡಿಯುವ ನೀರಿನ ಯೋಜನೆಗಳನ್ನು ಏನು ತೆಗೆದುಕೊಂಡಿದ್ದೇವೆ ಈ ಕೆಲಸ 2-3 ವರ್ಷಗಳಲ್ಲಿ ಆಗುವಂಥದ್ದನ್ನು ಕಾಲಮಿತಿಯೊಳಗೆ ಮಾಡದೆ 7-8 ವರ್ಷಗಳಿಂದ ಮಂದಗತಿಯಲ್ಲಿ ನಡೆಯುತ್ತಿದೆ. ಅದರ ಮೇಲ್ವಿಚಾರಣೆ ನೇರವಾಗಿ ಜಿಲ್ಲಾ ಪರಿಷತ್ತಿನ ಸಿ.ಇ.ಒ.ರವರಿಗೆ ಬರುವುದಿಲ್ಲ. It does not come under the purview of zilla parishats. It comes directly under the RDPR. ಯಾವುದೇ ಚೀಫ್ ಸೆಕ್ರೆಟರಿಯನ್ನು ಕೇಳಿದರೂ ಸಹ 3 ತಿಂಗಳಿಗೊಮ್ಮೆ ನಡೆಯುವ 20 ಪಾಯಿಂಟ್ ಪ್ರೋಗ್ರಾಮ್‌ನ ಮೀಟಿಂಗ್‌ಗೆ ಬಿಟ್ಟರೆ ಬಾಕಿ ಎಲ್ಲೂ ಸಹಿತ ಅವರ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು ಬರುವುದಿಲ್ಲ. ಆಂಧ್ರದ ಕಂಟ್ರಾಕ್ಟರ್‌ಗಳು ಕೆಲವರು ಬೇರೆ ಬೇರೆ ಕಡೆ ಕಂಟ್ರಾಕ್ಟ್‌ಗಳನ್ನು ತೆಗೆದುಕೊಂಡು ಲೋ-ಕ್ವಾಲಿಟಿ ವರ್ಕ್ಸ್ ಮಾಡಿರುವುದು ಅಷ್ಟೇ ಅಲ್ಲ ಅದಕ್ಕೆ ಟೈಮ್ ಸಹ ಜಾಸ್ತಿ ತೆಗೆದುಕೊಂಡಿದ್ದಾರೆ. ಆದ್ದರಿಂದ ದಯಮಾಡಿ ಆ ಕೆಲಸಗಳಿಗೆ ಒಂದು ಟೈಮ್ ಲಿಮಿಟ್ ಫಿಕ್ಸ್ ಮಾಡಿ ಆ ಯೋಜನೆಯನ್ನು ಕಂಪ್ಲೀಟ್ ಮಾಡುವುದಕ್ಕೆ ಆಗುತ್ತದೆಯೇ ಎಂದು ನಾವು ಕೇಳುತ್ತಿದ್ದೇವೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಕೆಲಸಗಳನ್ನು ಪೂರ್ತಿ ಮಾಡುವುದಕ್ಕೆ ಟೈಮ್ ಲಿಮಿಟ್ ಇದ್ದೇ ಇದೆ. ಮೂಲಭೂತವಾಗಿ ಜಿಲ್ಲಾ ಪರಿಷತ್ ನೇರವಾಗಿ ಅದನ್ನು ಅನುಷ್ಠಾನ ಮಾಡದೇ ಇದ್ದರೂ ಕೂಡ ಆಯಾಯ ಜಿಲ್ಲೆಯಲ್ಲಿನ ಎಲ್ಲಾ ಡೆವಲಪ್‌ಮೆಂಟ್ ವರ್ಕ್ಸ್ ಆಯಾಯ ಜಿಲ್ಲಾ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವುದರಿಂದ ಆ ಕೆಲಸಗಳ ಬಗ್ಗೆ ಹೇಳುವ ಅಧಿಕಾರ ಅವರಿಗೆ ಇದೆ. ಇಲ್ಲದಿದ್ದರೆ ಸರ್ಕಾರಕ್ಕೆ ಗೊತ್ತಾಗಲಿಕ್ಕೆ ಸಾಧ್ಯವಿಲ್ಲ. ನಾವು ಎಲ್ಲಾ ಡಿಸ್ಟ್ರಿಕ್ಟ್ಸ್‌ಗೆ ಹೋದಾಗ - 'ಎಲ್ಲಾ ಕಡೆಗೆ ಹೋಗಿ ಇನ್ಸ್‌ಪೆಕ್ಟ್ ಮಾಡಿ ಇನ್ಸ್‌ಪೆಕ್ಷನ್ ರಿಪೋರ್ಟ್ ಕೊಡಬೇಕೆಂದು' ನಾವು ತೀರ್ಮಾನ ತೆಗೆದುಕೊಂಡೆವು. ಇನ್ಸ್‌ಪೆಕ್ಷನ್ ರಿಪೋರ್ಟ್ ಬಂದಿದೆಯೇ ಅಥವಾ ಇಲ್ಲವೇ, ಈ ಇನ್ಸ್‌ಪೆಕ್ಷನ್ ರಿಪೋರ್ಟ್ ಏನು ಆಯಿತು ಇತ್ಯಾದಿಗಳನ್ನು ಖಂಡಿತವಾಗಿ ಜಿಲ್ಲಾ ಪಂಚಾಯತ್‌ನವರೇ ಈ ಪ್ರಶ್ನೆಗಳನ್ನು ಕೇಳಬೇಕು. ಜಿಲ್ಲಾ ಪಂಚಾಯಿತಿಯವರೆಗೆ ಕೇಳುವ ಅಧಿಕಾರ ಇದೆ. ಇದು ಆಗಬೇಕು.

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕಿನ ನೆರವಿನ ಯೋಜನೆಗಳ ಬಗ್ಗೆ ಮಾನ್ಯ ಸಚಿವರು ಹೇಳಿದರು. ನೆಲಮಂಗಲ ತಾಲ್ಲೂಕಿನಲ್ಲಿ ತ್ಯಾಮಗೊಂಡ್ಲುನಿಂದ ಸೋಮಪುರಕ್ಕೆ ಹೋಗಬೇಕಾದರೆ ಎಲ್ಲಾ ಕಡೆ ಚರಂಡಿ, ರಸ್ತೆ, ಬಟ್ಟೆ ಒಗೆಯುವ ಕಲ್ಲು ಹೀಗೆ ಎಲ್ಲಾ ಕೆಲಸವನ್ನು ಮಾಡಿದರು. ಆದರೆ ಒಂದೂ ಕೆಲಸ ಸಹ ಪೂರ್ತಿ ಆಗಲಿಲ್ಲ 60 ಸಾವಿರ ರೂಪಾಯಿಗಳನ್ನು ಕಟ್ಟಿ ಎಂದು ಹೇಳಿದರು. ಎಲ್ಲ ಹಣವನ್ನು ತೆಗೆದುಕೊಂಡು ಅಲ್ಲಿ ಸರಿಯಾಗಿ ಕೆಲಸ ಮಾಡದೆಯೇ ಹೋದರು. ವಿಶ್ವಬ್ಯಾಂಕಿನ ನೆರವಿನ ಯೋಜನೆಯಲ್ಲಿ ಒಂದು ನೀರಿನ ಟ್ಯಾಂಕನ್ನು ಕಟ್ಟಿದ್ದು ಅಲ್ಲಿ ಸೋರುತ್ತದೆ. ಇವರಿಗೆ ಇಂಜಿನಿಯರುಗಳು ಅಥವಾ ಯಾರದೇ ಕಂಟ್ರೋಲ್ ಇಲ್ಲ. ಎಲ್ಲಾ ಊರುಗಳಲ್ಲಿ ವಿಶ್ವಬ್ಯಾಂಕ್ ನೆರವಿನ ಅಡಿಯಲ್ಲಿ ಯಾವುದೇ ಕೆಲಸ ಮಾಡಿದರೂ ಎಂ.ಎಲ್.ಎ. ಅಥವಾ ಇತರೇ ಪ್ರತಿನಿಧಿಗಳನ್ನು ಕೇಳುವುದಿಲ್ಲ. ಯಾರೋ ಒಂದು ಕಮಿಟಿ ಮಾಡಿಕೊಂಡು

ಮಾಡಬಾರದ ಅನ್ಯಾಯ ಮಾಡುತ್ತಾರೆ. ದಯಮಾಡಿ ಮಾನ್ಯ ಮಂತ್ರಿಗಳು ಇದರ ಬಗ್ಗೆ ಪರಿಶೀಲನೆ ಮಾಡಿ ಸರ್ಕಾರವು ತರುವ ಸಾಲದ ಹಣವು ಉತ್ತಮವಾಗಿ ಪ್ರಯೋಜನ ಆಗುವ ರೀತಿಯಲ್ಲಿ ಖರ್ಚು ಮಾಡಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೆಂದು ಹೇಳಲಿಕ್ಕೆ ನಾನು ಪ್ರಯತ್ನಪಡುವುದಿಲ್ಲ. ಸರ್ಕಾರಕ್ಕೆ ಸಂಪೂರ್ಣವಾದ ಜವಾಬ್ದಾರಿ ಇದೆ. ಎಲ್ಲಾ ಡೆವಲಪ್‌ಮೆಂಟ್ಸ್ ಬಗ್ಗೆ ಸರ್ಕಾರಕ್ಕೆ ಜವಾಬ್ದಾರಿ ಇದೆ. ಆದರೆ ಜಿಲ್ಲೆಯಲ್ಲಿ, ಆಯಾಯ ತಾಲ್ಲೂಕಿನಲ್ಲಿ ವಿಶ್ವಬ್ಯಾಂಕ್ ನೆರವಿನ ಯೋಜನೆಗಳಾಗಲಿ, ಸರ್ಕಾರದ ಕೆಲಸಗಳಾಗಲಿ ಇವುಗಳು ಸರಿಯಾಗಿ ನಡೆಯುತ್ತಿವೆಯೇ ಅಥವಾ ಇಲ್ಲವೇ ಎಂದು ನೋಡುವಂಥ ಹೊಣೆಗಾರಿಕೆ ಅಲ್ಲಿದ್ದ ಚುನಾಯಿತ ಪ್ರತಿನಿಧಿಗಳ ಮೇಲೆ, ಎಂ.ಎಲ್.ಎ.ಗಳ ಮೇಲೆ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ವಿಶ್ವಬ್ಯಾಂಕ್ ನೆರವಿನ ಕೆಲವು ಯೋಜನೆಗಳು ಸರಿಯಾಗಿ ನಡೆಯುತ್ತಿಲ್ಲವೆಂದು ಏನು ದೂರುಗಳು ಇವೆ ಅದನ್ನು ನೋಡುವಂಥ ಜವಾಬ್ದಾರಿ ನಮಗೆ ಇದೆ. ಇಂತಿಂಥ ಕಡೆಗಳಲ್ಲಿ ಇಂತಿಂಥ ಕೆಲಸಗಳು ಸರಿಯಾಗಿ ಆಗಿಲ್ಲವೆಂದು ನೀವು ಹೇಳಿದರೆ ನಾನು ತಕ್ಷಣ ಅದನ್ನು ನೋಡಿಸುತ್ತೇನೆ, ಆ ಕೆಲಸವನ್ನು ಮಾಡಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಈ ಸಮಸ್ಯೆಯನ್ನು ಮಾನ್ಯ ಮಂತ್ರಿಯವರು ಅರ್ಥ ಮಾಡಿಕೊಳ್ಳಬೇಕು. ವಿಶ್ವಬ್ಯಾಂಕ್ ನೆರವಿನ ಕುಡಿಯುವ ನೀರಿನ ಯೋಜನೆ ಜೊತೆಗೆ ಇನ್ನೂ 2-3 ಕಾಂಪೋನೆಂಟ್ಸ್ ಇವೆ. 1) ಕುಡಿಯುವ ನೀರನ್ನು ಕೊಡತಕ್ಕಂಥದ್ದು 2) ಡ್ರೈನೇಜನ್ನು ಮಾಡತಕ್ಕಂಥದ್ದು ಮತ್ತು 3) ಲೋಕಲ್ ಕಾಂಟ್ರಿಬ್ಯೂಷನ್ ಸಹ ಕೆಲವು ಕಡೆಗಳಲ್ಲಿ ಕೊಡಬೇಕೆಂದು ಆಗಿದೆ. 'ಕಂಟ್ರಾಕ್ಟ್ ಪೋರ್ಷನ್‌ನ್ನು ಬೇರೆ ರಾಜ್ಯದ 3-4 ಜನ ತೆಗೆದುಕೊಂಡಿದ್ದಾರೆ' ಎಂದು ನಾವು ಹೇಳಿದೆವು. ಆದರಿಂದಲೇ ಈ ಕೆಲಸಗಳು ಇಷ್ಟೊಂದು ಡಿಲೇ ಆಗಿರುವುದು. ಈ ಡಿಲೇ 6 ತಿಂಗಳಿನಿಂದ ಆಗಿದೆ ಎಂದು ನಾನು ಹೇಳುತ್ತಿಲ್ಲ. ಜಿಲ್ಲಾ ಪರಿಷತ್ತಿನ ಸಿ.ಇ.ಓ. ರವರು ಇದನ್ನು ರಿವ್ಯೂ ಮಾಡತಕ್ಕಂಥ ಸಂದರ್ಭದಲ್ಲಿ ಆ ಇಂಜಿನಿಯರುಗಳು ಬರುತ್ತಲೇ ಇಲ್ಲ. ನಮಗೂ ಜಿಲ್ಲಾ ಪರಿಷತ್ತಿಗೂ ಸಂಬಂಧವೇ ಇಲ್ಲವೆಂದು ಆ ಇಂಜಿನಿಯರುಗಳು ಹೇಳುತ್ತಾರೆ. The Chief Engineer under PHE, Karnataka circle is answerable ಎಂದು ನನಗೆ ಅನೇಕ ಸಂದರ್ಭದಲ್ಲಿ ಹೇಳಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಅನೇಕ ಜಿಲ್ಲೆಗಳಲ್ಲಿ ರಿವ್ಯೂ ಮಾಡತಕ್ಕಂಥ ಸಂದರ್ಭದಲ್ಲಿ ಸಹಿತ ಇಡೀ ಜಿಲ್ಲೆಯಲ್ಲಿ ಈ ಸಮಸ್ಯೆ ಇದೆ. ತಮ್ಮಲ್ಲಿ ಮಾನ್ಯ ಸದಸ್ಯರುಗಳು ಮನವಿ ಮಾಡಿಕೊಳ್ಳುವುದೇನೆಂದರೆ ಒಂದು ಟೈಮ್ ಲಿಮಿಟ್ಸ್‌ನ್ನು ಫಿಕ್ಸ್ ಮಾಡಬೇಕು. ಈಗ ಏಪ್ರಿಲ್ ತಿಂಗಳು ನಡೆಯುತ್ತಿದೆ. ಕಳೆದ 3 ವರ್ಷಗಳಿಂದ, 5 ವರ್ಷಗಳಿಂದ, 6 ವರ್ಷಗಳಿಂದ ಪೆಂಡಿಂಗ್‌ನಲ್ಲಿರತಕ್ಕಂಥ ಕೆಲಸಗಳನ್ನು ಮುಂದಿನ 6 ತಿಂಗಳುಗಳಲ್ಲಿ ಮುಗಿಸುತ್ತೇವೆ ಎನ್ನುವಂಥ ಆಶ್ವಾಸನೆಯನ್ನು ಸರ್ಕಾರದವರು ಕೊಡಲಿಕ್ಕೆ ಸಾಧ್ಯವೇ?

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಟೈಮ್ ಲಿಮಿಟ್ ಇದೆ. ಟೈಮ್ ಲಿಮಿಟ್ ಇದ್ದರೂ ಕೂಡ ಆ ಟೈಮ್ ಒಳಗಾಗಿ ಕೆಲವು ಕಡೆ ಈ ಕೆಲಸಗಳನ್ನು ಮಾಡಿ ಮುಗಿಸಲಿಕ್ಕೆ ಆಗಿಲಿಲ್ಲ. ಏಕೆಂದರೆ ಸ್ಟೇಜ್ 1,2,3 ಹೀಗೆ ಇವೆಲ್ಲವೂ ಹಂತಹಂತವಾಗಿ ಆಗಬೇಕು. ಅದರಲ್ಲಿ ಕೆಲವು ಕಡೆ ಕಂಟ್ರಾಕ್ಟರುಗಳ ತೊಂದರೆ ಇದೆ. ಕೆಲವು ಕಡೆ ಇನ್ನೂ ಬೇರೆ ತೊಂದರೆಗಳು ಬರುತ್ತವೆ.....

ಅಧ್ಯಕ್ಷರು : ಈಗ ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಚರ್ಚೆಯನ್ನು ಮುಗಿಸೋಣ. ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಈಗಾಗಲೇ 15 ನಿಮಿಷಕ್ಕಿಂತ ಹೆಚ್ಚು ಸಮಯವನ್ನು ತೆಗೆದುಕೊಳ್ಳಲಾಗಿದೆ. ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಕುಡಿಯುವ ನೀರಿಗೆ ಸಂಬಂಧಪಟ್ಟ ಹಾಗೆ ಮುಂದೆ ವಿತೀನ್ ಒನ್ ಹವರ್‌ನಲ್ಲಿ ಈ ವಿಷಯ ಚರ್ಚೆಗೆ ಬರುತ್ತದೆ. ಆಗ ನೀವು ಏನು ಬೇಕಾದರೂ ಕ್ಲಾರಿಫಿಕೇಷನ್ ಕೇಳಬಹುದು. ಆದ್ದರಿಂದ ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳೋಣ. ದಯವಿಟ್ಟು ಸಹಕರಿಸಿ.

ಶಿಕ್ಷಕರ ವರ್ಗಾವಣೆಯಲ್ಲಿ ಕೌನ್ಸಿಲಿಂಗ್ ಪದ್ಧತಿ

253 (2602) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿಕ್ಷಕರ ವರ್ಗಾವಣೆಯಲ್ಲಿ ಕೌನ್ಸಿಲಿಂಗ್ ಬದಲಾವಣೆ ತರಬಹುದೇ;

ಆ) ದಂಪತಿಗಳಿಬ್ಬರನ್ನು ಒಂದೇ ಕಡೆ ವರ್ಗಾವಣೆ ಮಾಡಲಾಗುವುದೇ?

ಶ್ರೀ ಹೆಚ್.ಎಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಈಗಿರುವ ಕೌನ್ಸಿಲಿಂಗ್ ಪದ್ಧತಿಯಲ್ಲಿ ಇರುವ ಕೆಲವೊಂದು ಲೋಪದೋಷಗಳನ್ನು ಸರಿಪಡಿಸಿ ಕೌನ್ಸಿಲಿಂಗ್ ಪದ್ಧತಿಯನ್ನೇ ಅನುಸರಿಸಲಾಗುವುದು.

ಆ) ನಗರ ಪ್ರದೇಶವನ್ನು ಹೊರತುಪಡಿಸಿ ಶಿಕ್ಷಕರು ಕೋರುವ ಸ್ಥಳದಲ್ಲಿ ಹುದ್ದೆ ಖಾಲಿ ಇದ್ದಲ್ಲಿ ಆದ್ಯತೆ ಮೇರೆಗೆ ಪರಿಗಣಿಸಲಾಗುವುದು.

ಶ್ರೀ ಕೆ.ಗೋಪಾಲ ಪೂಜಾರಿ : ಮಾನ್ಯ ಅಧ್ಯಕ್ಷರೆ, ಹಾಲಿ ಇರುವ ಕೌನ್ಸಿಲಿಂಗ್ ಪದ್ಧತಿಯಿಂದ ನ್ಯಾಷನಲ್ ಹೈವೇ ಪಕ್ಕದಲ್ಲಿರುವಂಥ ಪಟ್ಟಣ ಪ್ರದೇಶಗಳಲ್ಲಿನ ಎಲ್ಲಾ ಶಾಲೆಗಳಲ್ಲಿ ಶಿಕ್ಷಕರು ಭರ್ತಿ ಆಗಿದ್ದಾರೆ. ಆದರೆ ಮಲೆನಾಡು ಪ್ರದೇಶಗಳಲ್ಲಿರತಕ್ಕಂಥ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಎದ್ದು ಕಾಣುತ್ತದೆ. ಈ ಒಂದು ಕೌನ್ಸಿಲಿಂಗ್ ಪದ್ಧತಿಯಿಂದ ಯಾವುದೇ ಒಬ್ಬ ಶಿಕ್ಷಕ ಮಲೆನಾಡು ಗುಡ್ಡ ಪ್ರದೇಶದ ಶಾಲೆಗಳಿಗೆ ಹೋಗುವ ಪರಿಸ್ಥಿತಿ ಇಲ್ಲದಿರುವುದರಿಂದ ಅಲ್ಲಿಯ ಮಕ್ಕಳಿಗೆ ಬಹಳ ಅನ್ಯಾಯವಾಗಿದೆ. ಇದೇ ಪದ್ಧತಿ ಮುಂದುವರಿದರೆ ಬಹುಶಃ ಮಲೆನಾಡು ಪ್ರದೇಶಗಳಲ್ಲಿರತಕ್ಕಂಥ ಎಲ್ಲಾ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿಂದ ಅಲ್ಲಿಯ ಮಕ್ಕಳಿಗೆ ಅನ್ಯಾಯವಾಗುವುದರಿಂದ ಅದನ್ನು ತಪ್ಪಿಸಿ ನ್ಯಾಯ ಒದಗಿಸಿಕೊಡಬೇಕೆಂದು ಇಲ್ಲಿ ಮಾನ್ಯ ಅಧ್ಯಕ್ಷರ ಮೂಲಕ ಸಂಬಂಧಪಟ್ಟ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.